<u>ದಿನಾಂಕ **28-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ **BS** ವಕೀಲರಿಂದ</u>

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನೇ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ದಾವ ಜಮೀನು ಸ.ನಂ.114 ಕುರಿತು ದಾವೆ ಹಾಕಿರುತ್ತೇನೆ. ಅದರ ಕ್ಷೇತ್ರ 9 ಎಕರೆ 31 ಗುಂಟೆ ಇರುತ್ತದೆ. ದಾವ ಜಮೀನು ಪೂರ್ವಕ್ಕೆ ಭೂತ ಮಲ್ಲಪ್ಪ ಜಮೀನು, ಪಶ್ಚಿಮಕ್ಕೆ ಹನುಮಪ್ಪ ಜಮೀನು, ಉತ್ತರಕ್ಕೆ ಪಿಂಜಾರ ಜಮೀನು ಇರುತ್ತದೆ ಅವರ ಹೆಸರು ನೆನಪಿಲ್ಲ ಮತ್ತು ದಕ್ಷಿಣಕ್ಕೆ ಹನುಮಂತರಾಯ ಜಮೀನು ಇರುತ್ತದೆ. ಮೇಲೆ ಹೇಳಿದ ಚಕ್ಕಬಂದಿಯನ್ನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿರುತ್ತೇನೆ. ಮೇಲೆ ಹೇಳಿದ ಚಕ್ಕಬಂದಿಯನ್ನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಹೆಸರು ಸಾಬಯ್ಯ ಇರುತ್ತದೆ. ನನ್ನ ತಂದೆ ಮೃತಪಟ್ಟು 60 ವರ್ಷ ಆಗಿರುತ್ತದೆ. ನನ್ನ ತಂದೆಗೆ ಇಬ್ಬರು ಗಂಡು, ಇಬ್ಬರು ಹೆಣ್ಣು ಮಕ್ಕಳು ಇರುತ್ತೇವೆ. ಅವರುಗಳು ನಾನು ಬಾಲಪ್ಪ, ಹನುಮಪ್ಪ, ಯಂಕಮ್ಮ ಮತ್ತು ಯಲ್ಲಮ್ಮ ಎಂದು ಇರುತ್ತೇವೆ. ನನ್ನ ಅಣ್ಣ ಹನುಮಪ್ಪ ಮೃತಪಟ್ಟಿರುತ್ತಾನೆ. ಯಂಕಮ್ಮ ಮತ್ತು ಯಲ್ಲಮ್ಮ ಮೃತಪಟ್ಟಿರುತ್ತಾರೆ. ನಾನು ಮತ್ತು ನನ್ನ ಅಣ್ಣ ಹನುಮಪ್ಪ 10-15 ವರ್ಷಗಳಿಂದ ಬೇರೆ ಬೇರೆ ವಾಸವಿರುತ್ತೇವೆ. 1987 ರಲ್ಲಿ ನಾನು ಮತ್ತು ಹನುಮಪ್ಪ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ವರ್ಷ ಹೇಳಲು ಬರುವುದಿಲ್ಲ ಆದರೆ 10-15 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತೇವೆ. ಹಿರಿಯರ ಸಮಕ್ಷಮ ವಿಭಾಗ ಆಗಿರುತ್ತದೆ ಯಾವುದೇ ದಾಖಲಾತಿ ಮಾಡಿರುವುದಿಲ್ಲ. ವಿಭಾಗದಂತೆ ಮುಟೇಶನಗಳು ಆಗಿರುತ್ತವೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ ಹನುಮಪ್ಪನ ಹೆಸರಿನಲ್ಲಿ ಇರುವ ಜಮೀನು ಸ.ನಂ. ಹೇಳಲು ಬರುವುದಿಲ್ಲ. ನನ್ನ ಹೆಸರಿನಲ್ಲಿ ಒಟ್ಟು 4 ಜಮೀನುಗಳು ಇರುತ್ತವೆ. ಸದರಿ ಜಮೀನುಗಳನ್ನು ನನ್ನ ಹೆಸರಿಗೆ ನನ್ನ ತಂದೆ ಮಾಡಿಸಿರುತ್ತಾರೆ.

ನನಗೆ ಇಬ್ಬರು ಹೆಂಡತಿಯರು ಇರುತ್ತಾರೆ. ಮೊದಲನೆ ಹೆಂಡತಿ ಹೆಸರು ರಂಗಮ್ಮ ಇದ್ದು ರಂಗಮ್ಮಳ ಮೂಲಕ ಹನುಮಂತಿ ಮಗಳು ಇರುತ್ತಾಳೆ. ಹನುಮಂತಿ ಹೆಸರಿನಲ್ಲಿ 2 ಎಕರೆ 7 ಗುಂಟೆ ಜಮೀನನ್ನು ನಾನು ನೀಡಿದ್ದು ಅದು ಅವಳ ಹೆಸರಿನಲ್ಲಿ ಇರುತ್ತದೆ. ಸದರಿ ಹನುಮಂತಿ ನನ್ನ ವಿರುದ್ದ ದಾವೆ 40/2016 ವಿಭಾಗಕ್ಕಾಗಿ ಹಾಕಿರುತ್ತಾಳೆ ಎಂದರೆ ಸರಿ. ಸದರಿ

ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಸಲ್ಲಿಸಿದ ನನ್ನ ಪ್ರತಿವಾದ ಪತ್ರದ ಕಂಡಿಕೆ 13(ಇ) ರಲ್ಲಿ ಸ.ನಂ.114 ರಲ್ಲಿ 9 ಎಕರೆ 31 ಗುಂಟೆ ಜಮೀನು ನನ್ನ ಮತ್ತು ನನ್ನ ಸಹೋದರರ ಮತ್ತು ಸಹೋದರಿಯರ ನಡುವೆ 1987 ರಲ್ಲಿ ಆದ ನೊಂದಾಯಿತ ವಿಭಾಗ ಪತ್ರದಂತೆ ಯಂಕಮ್ಮಳ ಭಾಗಕ್ಕೆ ಬಂದಿರುತ್ತದೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಿಭಾಗದ ಪತ್ರದ ಪ್ರಕಾರ ಸ.ನಂ.114 ಕ್ಕೆ ಯಂಕಮ್ಮಳೇ ಮಾಲೀಕಳು ಮತ್ತು ಕಬ್ಜೆದಾರಳು ಆಗಿರುತ್ತಾಳೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಜಮೀನಿಗೆ ಸೇರಿದಂತೆ ಆರ್.ಆರ್.ಟಿ ಅಪಿಲ್ ನಂ.109/2022 ರಲ್ಲಿ ಉಪ ವಿಭಾಗಾಧಿಕಾರಿ ರಾಯಚೂರು ಇವರಲ್ಲಿ ನಾನು ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ದಿನಾಂಕ 30.10.2023 ರಂದು ನನ್ನ ವಿರುದ್ಧ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಮೇಲ್ಮನವಿ ಸಲ್ಲಿಸಿಲ್ಲ ಮತ್ತು ಆದೇಶ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತಂದೆ ಹನುಮಂತರಾಯ ಯಂಕಮ್ಮಳಿಗೆ ಮಗ ಆಗಿರುತ್ತಾನೆ. ಸ.ನಂ.114 ವಿಭಾಗ ಪತ್ರದಂತೆ ಯಂಕಮ್ಮಳೇ ತನ್ನ ಜೀವಂತ ಅವಧಿಯಲ್ಲಿ ಮಾಲೀಕಳು ಮತ್ತು ಕಬ್ಜೆದಾರಳು ಆಗಿದ್ದಳು ಎಂದರೆ ಸರಿಯಲ್ಲ. ಆಕೆ ಮರಣ ನಂತರ ಹನುಮಂತರಾಯ ಕಬ್ಜೆದಾರನು ಮತ್ತು ಮಾಲೀಕನಾಗಿರುತ್ತಾನೆ ಎಂದರೆ ಸರಿಯಲ್ಲ. ಹನುಮಂತರಾಯನ ವಿರುದ್ಧ ನಾನು ದಾವೆ ಮಾಡಿಲ್ಲ ಎಂದರೆ ಈ ದಾವೆಯನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಹನುಮಂತರಾಯ ಪಕ್ಷಕಾರನಾಗಿರುವುದಿಲ್ಲ ಎಂದರೆ ಸರಿಯಲ್ಲ. 1987 ರಲ್ಲಿ ಭಾಗ ಆಗಿ ಆಸ್ತಿಗಳು ಹಂಚಿಕೆ ವಿಭಾಗ ಪತ್ರದಂತೆ ಹಂಚಿಕೆ ಆಗಿದ್ದರು ಈಗ ಭಾಗ ಆಗಿರುವುದಿಲ್ಲ ಎಂದು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗೆ ನಾನು ಮಾಲೀಕನು ಮತ್ತು ಕಬ್ಜೆದಾರನು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.